## ಯಾವುದು ಇತಿಹಾಸ

ವಿಶಾಲ ಮೌರ್ಯ ಸಾಮ್ರಾಜ್ಯವನ್ನು ಸ್ಥಾಪಿಸಿದ ಹಾಗೂ ವಿದೇಶಿ ಆಡಳಿತ (ಸೆಲ್ಯೂಕಸ್) ದಿಂದ ಪಂಜಾಬಿನ ವಿಮೋಚನೆ ಮಾಡಿದ ಚಂದ್ರಗುಪ್ತನ ಸಾಧನೆಯ ಹಿಂದೆ ಚಾಣಕ್ಯ ತಂತ್ರ ಇತ್ತು. ಸದೃಢವಾದ ಸಾಮ್ರಾಜ್ಯಕ್ಕೆ ಬಲಶಾಲಿಯಾದ ಸೈನ್ಯದ ಅಗತ್ಯವನ್ನು ಚಾಣಕ್ಯ ಕಂಡಿದ್ದ. ಅರ್ಥಶಾಸ್ತ್ರ ಮೌರ್ಯರ ಸೈನಿಕ ವ್ಯವಸ್ಥೆಯ ಮೇಲೆ ಬೆಳಕು ಬೀರಿದೆ. ಆನೆ, ಕುದುರೆ, ರಥ, ಕಾಲಾಳುಗಳು ಮೌರ್ಯ ಸೇನೆಯ ವಿಭಾಗಗಳಾಗಿದ್ದವು. ಸೈನಿಕರು ಆನೆ-ಕುದುರೆ-ರಥಗಳ ಮೇಲೆ ಕುಳಿತು ಹೋರಾಡುತ್ತಿದ್ದರು. ಬಿಲ್ಲು-ಬಾಣ, ಈಟಿ, ಬರ್ಚಿ, ಖಡ್ಗ-ಗುರಾಣಿಗಳು ಮುಖ್ಯ ಯುದ್ಧೋಪಕರಣಗಳಾಗಿದ್ದವು. ಸುಮಾರು 10 ಸೈನಿಕರ ಗುಂಪು ಓರ್ವ 'ಪಾದಿಕ' (Commander)ನ ಕೈಕೆಳಗೂ, 100 ಸೈನಿಕರು 'ಸೇನಾಪತಿ' ಯ ಕೈಕೆಳಗೂ, 1000 ಸೈನಿಕರು 'ನಾಯಕ'ನ ಕೈಕೆಳಗೂ ಇರುವುದಾಗಿತ್ತು. ಹೆಚ್ಚಿನ ಸೈನಿಕರೆಲ್ಲಾ ದೇಶೀಯರೇ ಆಗಿದ್ದರು. ಸಾಮರ್ಥ್ಯವಂತರು ಮತ್ತು ಪರಿಣಿತರನ್ನು ಸೇನಾನಾಯಕರಾಗಿ ನೇಮಿಸಲಾಗುತ್ತಿತ್ತು. ಆ ಸೈನಿಕ ವ್ಯವಸ್ಥೆಯ ವೈಶಿಷ್ಟ್ಯವೆಂದರೆ, ಆ ಕಾಲದಲ್ಲೇ ಇದ್ದ ನೌಕಾಪಡೆ ಹಾಗೂ ಯುದ್ಧ ಸಾಮಗ್ರಿಗಳ ಸಾಗಾಟದ ಪಡೆ. ಚಾಣಕ್ಯ ಸೈನ್ಯ ಸಾಗಲು ಮತ್ತು ಯುದ್ಧ ಮಾಡಲು ಯೋಗ್ಯವಾದ ಭೂಭಾಗದ ವಿವರಣೆ ನೀಡಿದ್ದಾನೆ. ಮರುಭೂಮಿ, ಜವುಗು ಭೂಮಿ, ಪರ್ವತ-ಕಣಿವೆ, ಕಡಿದಾದ ಬೆಟ್ಟಗಳು ಅಪಾಯಕಾರಿ ಸ್ಥಳಗಳೆಂದೂ, ಅವುಗಳನ್ನು ವೈರಿಗಳ ನಿಗ್ರಹಕ್ಕಾಗಿ ಲಾಭದಾಯಕವಾಗಿ ಬಳಸಬೇಕೆಂದೂ ಹೇಳಿದ್ದಾನೆ. ಒಟ್ಟು ಸೈನ್ಯದ ಮೂರನೇ ಒಂದು ಭಾಗದ ಪದಾತಿದಳ ಆನೆಸೈನ್ಯ, ಅಶ್ವದಳವನ್ನು ರಣರಂಗದ ಮುಂಭಾಗದಲ್ಲೂ, ಉಳಿದ ಭಾಗವನ್ನು ಪಾರ್ಶ್ವಗಳಲ್ಲೂ, ಹಿಂದೆಯೂ ನೆಲೆಗೊಳಿಸಬೇಕೆಂದಿದ್ದಾನೆ. ಕಾಯ್ದಿರಿಸಿದ ಪಡೆ (Reserve force) ಇಲ್ಲದೆ ಯಾವತ್ತೂ ಯುದ್ಧ ಸಾರಬಾರದೆಂದಿದ್ದಾನೆ. ವ್ಯೂಹಾತ್ಮಕ ಹೋರಾಟಕ್ಕಾಗಿ ಕೆಲವು ವ್ಯೂಹಗಳನ್ನು ಸೂಚಿಸಿದ್ದಾನೆ. (ಉದಾ: ಸರ್ಪ-ವೃತ್ತ ವ್ಯೂಹ) ರಕ್ಷಣಾತ್ಮಕ ಹಾಗೂ ಆಕ್ರಮಣಕಾರೀ ಕಾರ್ಯಾಚರಣೆಯ ಬಗ್ಗೆಯೂ ತಿಳಿಸಿರುತ್ತಾನೆ. ವೈರಿ ಪಾಳೆಯದ ಮೇಲೆರಗಲು 'ವಿಶೇಷ ಕಾರ್ಯಾಚರಣೆ' ಯ (Special mission) ಶೂರರು (ಕಮಾಂಡೋ) ಬೇಕೆಂದಿದ್ದಾನೆ. ನದಿಯನ್ನು ದಾಟಬೇಕಾದ ಸಂದರ್ಭದಲ್ಲಿ ಎದುರಾಳಿಯು ತಡೆಯೊಡ್ಡಿದರೆ, ಸ್ವಲ್ಪದೂರ ಬೇರೆಡೆಯಲ್ಲಿ ನದಿದಾಟಿ, ವೈರಿಪಾಳಯಕ್ಕೆ ಹಿಂದಿನಿಂದ ಸುತ್ತುವರಿಯಬೇಕು. ಅಲೆಗ್ಸಾಂಡರ್, ಪುರೂರವನ ವಿರುದ್ಧ ಈ ತಂತ್ರ ಬಳಸಿದ್ದ. ಶೇರ್‌ಷಹ, ಹುಮಾಯೂನ ವಿರುದ್ಧ ಅದೇ ರೀತಿಯಾಗಿ ನದಿ ದಾಟಿ, ಅವನನ್ನು ಸೋಲಿಸಿದ್ದ. ಚಾಣಕ್ಯ ಅಸಾಂಪ್ರದಾಯಿಕ ಯುದ್ಧವನ್ನೂ (guerilla tactics) ಚಲನಶೀಲ ಯುದ್ಧವನ್ನೂ (mobile warfare) ಪ್ರತಿಪಾದಿಸಿದ್ದ. ಅವನಿಗೆ ಯುದ್ಧದ ರೀತಿ (means) ಗಿಂತ ಫಲಿತಾಂಶ (end) ಮುಖ್ಯವಾಗಿತ್ತು. ಧರ್ಮಸ್ಥಾಪನೆಯ ಯುದ್ಧದಲ್ಲಿ ಯಾವುದೂ ನಿಷೇಧವಲ್ಲ ಎಂಬ ತತ್ವ ಅವನದಾಗಿತ್ತು. (Everything is fair in war)

ಚಾಣಕ್ಯ ಶಿಸ್ತುಪಾಲನೆಗೆ (discipline) ಅತೀ ಮಹತ್ವ ನೀಡಿದ್ದ. ಅವನು 'ಸ್ವಾಭಾವಿಕ ಶಿಸ್ತು' ಮತ್ತು 'ನಿರ್ದೇಶಿತ ಶಿಸ್ತು' ಎಂಬ ಎರಡು ವಿಭಾಗಗಳಲ್ಲಿ ಸೈನ್ಯದಲ್ಲಿರಬೇಕಾದ ಶಿಸ್ತನ್ನು ಕಂಡಿದ್ದಾನೆ. ಸ್ವಾಭಾವಿಕ ಶಿಸ್ತು ಯಾವುದೇ ಒತ್ತಡ ಅಥವಾ ಒತ್ತಾಯವಿಲ್ಲದೆ, ತಾನಾಗಿಯೇ ರೂಪಿಸಿಕೊಳ್ಳಲ್ಪಟ್ಟ ನಿಯಮವಾದರೆ, ನಿರ್ದೇಶಿತ ಶಿಸ್ತು ಆದೇಶಿಸಲ್ಪಟ್ಟ, ಹೇರಲ್ಪಟ್ಟ ಶಿಸ್ತುಪಾಲನೆ. ಅಶಿಸ್ತುರಹಿತ ಸಂಖ್ಯಾಬಲವು ಸಹಕಾರಿಯಾಗದುಆ ಎಂಬುದೇ ಚಾಣಕ್ಯ ನೀತಿ. ಇದು ಸರ್ವಕಾಲಿಕ ಸತ್ಯ. ಸೇನೆಯ ದಂಡಯಾತ್ರೆಯಲ್ಲಿ, ಆಕ್ರಮಣದಲ್ಲಿ, ಸ್ವರಕ್ಷಣೆಯಲ್ಲಿ ಹಾಗೂ ಠಿಕಾಣಿ ಹೂಡುವುದರಲ್ಲಿ ಶಿಸ್ತುಬದ್ಧವಾಗಿರಬೇಕೆಂದು ಚಾಣಕ್ಯ ಎಚ್ಚರಿಸಿದ್ದಾನೆ. ಶತ್ರುಗಳನ್ನು ಹೇಗಾದರೂ ಸೋಲಿಸಬೇಕೆಂಬುದು ಚಾಣಕ್ಯನ ಸಿದ್ಧಾಂತವಾಗಿತ್ತು. ಅದಕ್ಕಾಗಿ ಆರು ರೀತಿಯ ಧೋರಣೆಯನ್ನು ಅವನು ಸೂಚಿಸಿದ್ದಾನೆ. (ಯುದ್ಧ, ಶಾಂತಿ, ತಟಸ್ಥ ನೀತಿ, ಪೂರ್ವತಯಾರಿ, ಸಂಧಾನ, ಇಬ್ಬಗೆಯ ನೀತಿ) ಒಬ್ಬನೊಡನೆ 'ಸಖ್ಯ' ಮತ್ತು ಇನ್ನೊಬ್ಬನೊಡನೆ 'ವೈರ' ದ ಇಬ್ಬಗೆಯ ನೀತಿಯನ್ನು ಅನುಸರಿಸುವುದೂ ಚಾಣಕ್ಯ ತಂತ್ರ. 'ಶತ್ರುವಿನ' ಶತ್ರು ಮಿತ್ರ'- ಎಂಬುದನ್ನು ರಾಜತಾಂತ್ರಿಕ ಉಪಾಯವಾಗಿ ಬಳಸಿಕೊಳ್ಳಲು ಚಾಣಕ್ಯ ಸೂಚಿಸಿದ್ದ.

ಚಾಣಕ್ಯ ಆಡಳಿತದಲ್ಲಿ ಗೂಢಚರ್ಯೆಯ ಬಗ್ಗೆ ವಿವರವಾಗಿ ತಿಳಿಸಿದ್ದಾನೆ. ಪ್ರಭಾವ ಮತ್ತು ಅಧಿಕಾರ ಭ್ರಷ್ಟಾಚಾರವನ್ನು ಪೋಷಿಸುವುದಾದ್ದರಿಂದ (Power and Authority breed corruption) ಅದರ ನಿಯಂತ್ರಣಕ್ಕಾಗಿ ಗೂಢಚಾರರನ್ನು ನೇಮಿಸಬೇಕೆಂದಿದ್ದಾನೆ. ಚಂದ್ರಗುಪ್ತನಡಿಯಲ್ಲಿ ಅತ್ಯಂತ ಪರಿಣಾಮಕಾರಿಯಾದ ಗೂಢಚಾರ ದಳವಿತ್ತು. ದೇಶದೊಳಗಿನ ವಿದ್ಯಮಾನಗಳನ್ನು ತಿಳಿಯಲು ಮತ್ತು ವೈರಿ ಪಾಳಯದ ವಿದ್ಯಮಾನಗಳನ್ನು ತಿಳಿಯುವುದಕ್ಕಾಗಿ ಗುಪ್ತಚರರನ್ನು ನೇಮಿಸುವುದಾಗಿತ್ತು. ಗುಪ್ತಚಾರರು ಶತ್ರುದೇಶದೊಳಗೆ ನುಸುಳಿ, ಕ್ರಾಂತಿ ಎಬ್ಬಿಸುವುದು, ವಿಧ್ವಂಸಕ ಕೃತ್ಯ (Sabotage) ನಡೆಸುವುದು .... ಇತ್ಯಾದಿಗಳಲ್ಲಿ ನಿರತರಾಗಬೇಕೆಂದು ಚಾಣಕ್ಯ ತಿಳಿಸಿದ್ದ. ಗೂಢಚಾರರ ಮೇಲೂ ಗೂಢಚಾರರನ್ನು ನೇಮಿಸಬೇಕೆಂಬುದು ಚಾಣಕ್ಯನ ಮತವಾಗಿತ್ತು. (counter espionage) ವೈರಿಗಳನ್ನು ಹತ್ತಿಕ್ಕಲು ಚಾಣಕ್ಯ ಇತರ ರಾಜರೊಡನೆ ಮೈತ್ರಿ ಮಾಡಿಕೊಳ್ಳಬೇಕೆಂದಿದ್ದಾನೆ (alliance system). ಸೈನಿಕರಲ್ಲಿ ಅಸಂತುಷ್ಟಿ ಇರಬಾರದೆಂದೂ, ಸೈನಿಕರು ದಂಗೆಯೇಳದಂತೆ ನೋಡಿಕೊಳ್ಳಬೇಕೆಂದೂ ರಾಜನಿಗೆ ಸಲಹೆ ನೀಡಿದ್ದ. ಸೈನಿಕ ದೌರ್ಜಲ್ಯದ ಕಾರಣಗಳನ್ನು ಚಾಣಕ್ಯ, ಪಕ್ಷಾಂತರ, ಏಕಾಂಗಿತನ, ನಿಯಂತ್ರಣ ಕಳೆದುಕೊಳ್ಳುವುದು, ನಾಯಕತ್ವದ ಅಭಾವ ಮತ್ತು ತಪ್ಪಾದ ಧೋರಣೆಗಳೆಂದು ವಿಂಗಡಿಸಿದ್ದಾನೆ. ದೇಶಪ್ರೇಮ, ರಾಜನಿಷ್ಠೆ ಮತ್ತು ಧಾರ್ಮಿಕ ನಂಬಿಕೆಗಳು ಪ್ರಭಾವ ಬೀರುವಂತಹ ಮಾನಸಿಕ ಅಂಶಗಳೆಂದೂ ತಿಳಿಸಿದ್ದಾನೆ. ಯಾವುದೇ ಯುದ್ಧಗಳಿಗೂ ಮಾನಸಿಕ ತಯಾರಿ ಅಗತ್ಯವೆಂದೂ, ಯುದ್ಧಗಳನ್ನು ರಣರಂಗದಲ್ಲಿ ಹೋರಾಡುವ ಮೊದಲು, ಮನಸ್ಸಿನಲ್ಲೆ ಆಕ್ರಮಣದ ರೂಪುರೇಷೆಯನ್ನೂ, ಸೋಲು-ಗೆಲುವುಗಳನ್ನೂ ವಿಮರ್ಶಿಸಿಕೊಳ್ಳಬೇಕೆಂದಿದ್ದಾನೆ. ರಾಜನೀತಿಜ್ಞನಾಗಿ ಚಾಣಕ್ಯ ಓರ್ವ ತೀಕ್ಷ್ಣ ವಾಸ್ತವವಾದಿ. ಮಿತ್ರ ರಾಜರೊಡನೆ ಹಾಗು ಶತ್ರುಗಳೊಡನೆ ಹೇಗೆ ವ್ಯವಹರಿಸಬೇಕೆಂಬುದನ್ನು ಚಾಣಕ್ಯ ಚಂದ್ರಗುಪ್ತನ ಆಡಳಿತದಲ್ಲಿ ತೋರಿಸಿಕೊಟ್ಟಿದ್ದಾನೆ. ಯುದ್ಧದಲ್ಲಿ ಸೋತುಹೋದ ರಾಜರನ್ನು ಮನ್ನಿಸಬೇಕೆಂದೂ, ಆಮೇಲೆ ಅವರನ್ನೇ ಮರುಸ್ಥಾಪನೆ ಮಾಡಬೇಕೆಂದೂ ಹೇಳಿದ್ದಾನೆ. ನಂದರಾಡಳಿತ ಕೊನೆಗೊಂಡ ಮೇಲೆ ಅವರ ಪ್ರಧಾನಿಯಾದ ಅಮಾತ್ಯ ರಾಕ್ಷಸನನ್ನೇ ಚಂದ್ರಗುಪ್ತನ ಅಮಾತ್ಯನನ್ನಾಗಿ ಮಾಡಿದ್ದ ಚಾಣಕ್ಯ. 'ಅರ್ಥಶಾಸ್ತ್ರ' ಮಹಾಗ್ರಂಥವಾಗಿ (magnus opus) ಮಾನವಿಕಾಧ್ಯಯನಕ್ಕೆ ಅಪಾರ ಕೊಡುಗೆ ನೀಡಿದೆ. ಚಾಣಕ್ಯನ ಅಂತರದೃಷ್ಟಿ, ದೂರದೃಷ್ಟಿ ಹಾಗೂ ಜಾಣತನ ಇತಿಹಾಸ ಪ್ರಸಿದ್ಧವಾಗಿ ಚಿರಸ್ಮರಣೀಯವಾಗಿದೆ.